# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ 406
ಮೈಸೂರು-570 005

ಸಂಖ್ಯೆ:ಡಿವಿ8/ಡಿ4-118/ಐಸಿಎಆರ್-ಡಿಎಂಆರ್ಎಲ್/1979-80(Vol-IV) ದಿನಾಂಕ: 15-06-2024

## ಸುತ್ತೋಲೆ

ವಿಷಯ: ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳು ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಂಬಂಧ ಹೊರದೇಶಕ್ಕೆ ಹೋಗಿಬರಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ಸನ್ಮಾನ್ಯ ಕುಲಪತಿಯವರ ಆದೇಶ ದಿನಾಂಕ:10-06-2024

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳು ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಹಾಗೂ ಇನ್ನಿತರೆ ವಿಷಯಗಳಿಗೆ ಸಂಬಂಧಿಸಿದಂತೆ ವಿದೇಶಕ್ಕೆ ತೆರಳುವ ಸಂದರ್ಭದಲ್ಲಿ ವೀಸಾ ಪಡೆಯುವ ಸಂಬಂಧ ವಿಶ್ವವಿದ್ಯಾನಿಲಯದಿಂದ No Due Certificate ಅನ್ನು ಪಡೆಯಲು ಹಾಗೂ ವಿದೇಶ ಪ್ರಯಾಣ ಕೈಗೊಳ್ಳಲು ಅನುಮತಿ ಕೋರುವ ಸಂಬಂಧ ವಿಶ್ವವಿದ್ಯಾನಿಲಯಕ್ಕೆ ಒಂದು ತಿಂಗಳು ಮುಂಚಿತವಾಗಿ ಅರ್ಜಿಯನ್ನು ಸಲ್ಲಿಸುವಂತೆ ತಿಳಿಸಲಾಗಿದೆ. ಹಾಗೆಯೇ ವಿದೇಶ ಪ್ರಯಾಣಕ್ಕೆ ಸಂಬಂಧಿಸಿದಂತೆ ಘಟನೋತ್ತರ ಮಂಜೂರಾತಿ ನೀಡಲು ಇನ್ನು ಮುಂದೆ ಸಾಧ್ಯವಿರುವುದಿಲ್ಲ ಎಂಬುದನ್ನು ಸಹ ತಿಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ತಮ್ಮ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧ್ಯಾಪಕರುಗಳ ಗಮನಕ್ಕೆ ತರುವಂತೆ ಹಾಗೂ ಅದರಂತೆ ಮುಂದಿನ ದಿನಗಳಲ್ಲಿ ನಿಗಧಿತ ಸಮಯದೊಳಗೆ ಮನವಿ ಪತ್ರಗಳನ್ನು ಸಲ್ಲಿಸುವಂತೆ ತಿಳಿಸಲು ನಿರ್ದೇಶಿತಳಾಗಿದ್ದೇನೆ.

15/6/2024
ಕುಲಸಚಿವ

ಇವರಿಗೆ:

1. ಅಧ್ಯಕ್ಷರು, ಎಲ್ಲಾ ವಿಜ್ಞಾನ/ವಾಣಿಜ್ಯ/ಕಲಾ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು.
2. ನಿರ್ದೇಶಕರು, ಎಲ್ಲಾ ಅಧ್ಯಯನ ಸಂಸ್ಥೆ/ಕೇಂದ್ರ, ಮಾನಸಗಂಗೋತ್ರಿ, ಮೈಸೂರು.
3. ಪ್ರಾಂಶುಪಾಲರು, ಯುವರಾಜ ಕಾಲೇಜು/ಮಹಾರಾಜ ಕಾಲೇಜು/ಲಲಿತ ಕಲಾ ಕಾಲೇಜು/ವಿ.ವಿ.ಸಂಜೆ ಕಾಲೇಜು ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.
4. ಉಪ ಕುಲಸಚಿವರು/ಸಹಾಯಕ ಕುಲಸಚಿವರು/ಅಧೀಕ್ಷಕರು, ಸಿಬ್ಬಂಧಿ ವಿಭಾಗ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಸಂಯೋಜಕರು, ಐಸಿಡಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು – ಸದರಿ ಮಾಹಿತಿಯನ್ನು ಲಗತ್ತಿಸಿರುವ ಅಡಕಗಳೊಂದಿಗೆ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಹಾಗೂ ಸುಶಾಸನದ (Good Governence) ಕ್ರಮ ಸಂಖ್ಯೆ 26ರಲ್ಲಿ ಅಪ್‌ಲೋಡ್ ಮಾಡಲು ಸೂಕ್ತ ಕ್ರಮಕೈಗೊಳ್ಳಲು ಕೋರಲಾಗಿದೆ.
6. ಕಛೇರಿ ಪ್ರತಿ.

Scanned with OKEN Scanner